# ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹಿರಿಯೂರು

## ಸಿ.ಸಿ ನಂ.899/2020

| | | | |
|---|---|---|---|
| ಸಾಕ್ಷಿದಾರರ ಹೆಸರು | – | ಕರಿಯಪ್ಪ | ಪಿಡಬ್ಲ್ಯೂ-3 |
| ತಂದೆಯ ಹೆಸರು | – | ಕರಿಯಪ್ಪ | ಪಿಡಬ್ಲ್ಯೂ-3 |
| ವಯಸ್ಸು | – | 65 ವರ್ಷ | |
| ಉದ್ಯೋಗ | – | ವ್ಯವಸಾಯ | |
| ವಾಸ | – | ಕೆ ಕೆ ಹಟ್ಟಿ ಗ್ರಾಮ | |

**ದಿನಾಂಕಃ 06.01.2025 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.**

### ಸಾಕ್ಷಿದಾರರ ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದ

ನನಗೆ ಚಾಸಾ.1 ಮತ್ತು 4 ರವರು ನನಗೆ ಗೊತ್ತು. ಚಾಸಾ.1 ರವರು 2 ವರ್ಷಗಳ ಹಿಂದೆ ಮೃತಪಟ್ಟಿದ್ದಾರೆ . ಸಾಕ್ಷಿ ಮಹಜರ್ ಮತ್ತು ನಕಾಶೆಯಲ್ಲಿರುವ ಸಹಿ ನೋಡಿ ಗುರುತಿಸಿದ್ದರಿಂದ ದಾಖಲೆಗಳನ್ನು ನಿಪಿ-3, 4 ಎಂದು ಸಹಿಗಳನ್ನು ನಿಪಿ-3(ಎ), 4(ಎ) ಎಂದು ಗುರುತಿಸಲಾಯಿತು. ನಿಪಿ-3 ಕ್ಕೆ 5-6 ವರ್ಷಗಳ ಹಿಂದೆ ಅಪಘಾತವದ ಸ್ಥಳದಲ್ಲಿ ಸಹಿ ಮಾಡಿದ್ದೇನೆ. ಆ ಸಮಯದಲ್ಲಿ ಪೊಲೀಸರು ಟಿ ವಿ ಎಸ್ ವಾಹನವನ್ನು ಅಮಾನತ್ತು ಪಡಿಸಿಕೊಂಡಿದ್ದಾರೆ ಅದರ ನಂಬರ್ ನನಗೆ ನೆನಪಿಲ್ಲ. ಆ ಸಮಯದಲ್ಲಿ ನನ್ನ ಜೊತೆ ಚಾಸಾ.4 ರವರು ಇದ್ದರು. ನಿಪಿ-4 ಕ್ಕೆ 5-6 ವರ್ಷಗಳ ಹಿಂದೆ ಅಪಘಾತವಾದ ಸ್ಥಳದಲ್ಲಿ ಸಹಿ ಮಾಡಿದ್ದೇನೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಮತ್ತು ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಸ ಸ ಅಭಿಯೋಜಕರು ಕೋರಿದ್ದರಿಂದ ಅನುಮತಿ ನೀಡಲಾಯಿತು)

### ಪಾಟೀ ಸವಾಲುಃ ಮಾನ್ಯ ಸ ಸ ಅ ರವರಿಂದಃ

ದಿಃ 27.04.2019 ರಂದು ಅಪಘಾತವಾಗಿದ್ದು ಆಗ ನಾನು ನಿಪಿ-3, 4 ಕ್ಕೆ ಸಹಿ ಮಾಡಿದ್ದೇನೆ ಎಂದರೆ ಸರಿ. ಆಗ ಚಾಸಾ.1 ರವರು ಆ ಸಮಯದಲ್ಲಿ ಇದ್ದರು. ಕೆಎ 34 4163 ರ

ಲಾರಿಯನ್ನು ವಶಪಡಿಸಿಕೊಂಡಿದ್ದಾರೆ ಎಂದರೆ ಸರಿ. ಟಿ ಎಸ್ ನಂಬರ್ ಕೆಎ 44 ಕ್ಯೂ 9046 ಎಂದರೆ ಸರಿ. ಪೊಲೀಸರು ಬೆಳಿಗ್ಗೆ 11 ರಿಂದ 12.45 ರ ಸಮಯದಲ್ಲಿ ಮಹಜರ್ ಮಾಡಿದ್ದಾರೆ ಎಂದರೆ ಸರಿ. ಆ ಸಮಯದಲ್ಲಿ ಚಾಸಾ.1, 4 ರವರ ಸಹಿ ಮಾಡಿದ್ದಾರೆ ಎಂದರೆ ಸರಿ.

**ಪಾಟೀ ಸವಾಲು ಆರೋಪಿತರ ಪರ ಶ್ರೀಸಿ ಕೆ ವಕೀಲರಿಂದ–**

ಪಿಯಾರ್ದಿ, ಮೃತ ಪ್ರೇಮಣ್ಣ ಮತ್ತು ನಾವು ದೂರದ ಸಂಬಂಧಿಕರು ಎಂದರೆ ನಿಜ. ಅಪಘಾತವಾದ ಸ್ಥಳಕ್ಕೆ ಸಂಜೆ 6 ರಿಂದ 6.45 ರ ಸಮಯದಲ್ಲಿ ಹೋಗಿದ್ದೆವು. ನಿಪಿ–3,4 ರ ದಾಖಲೆಗಳಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ನಿಜ. ಪೊಲೀಸರು ಸಹಿ ಮಾಡಲು ಹೇಳಿದ್ದರಿಂದ ಸಹಿ ಮಾಡಿದ್ದೇನೆ ಎಂದರೆ ನಿಜ. ನಿಪಿ–3, 4 ಕ್ಕೆ ಯಾವ ಕಾರಣಕ್ಕೆ ಸಹಿ ಮಾಡಿದ್ದೇನೆ ಎಂದು ನನಗೆ ಗೊತ್ತಿಲ್ಲ ಎಂದರೆ ನಿಜ. ಪೊಲೀಸರು ನನಗೆ ಪಂಚರಾಗಿ ಬರಲು ಯಾವುದೇ ನೋಟೀಸ್ ನೀಡಿಲ್ಲ. ಪೊಲೀಸರು ಸಹಿ ಮಾಡಲು ಹೇಳಿದ್ದರಿಂದ ನಾನು ದಾಖಲೆಗಳಿಗೆ ಸಹಿ ಮಾಡಿದ್ದೇನೆ ಎಂದರೆ ನಿಜ. ನನ್ನ ಸಮಕ್ಷಮ ಯಾವುದೇ ವಾಹನಗಳನ್ನು ಜಪ್ತು ಮಾಡಿಲ್ಲ ಎಂದರೆ ನಿಜ. ನನಗೆ ಈ ಘಟನೆ ಬಗ್ಗೆ ಯಾವುದೇ ವಿಚಾರ ಗೊತ್ತಿಲ್ಲದಿದ್ದರೂ ಸಹ ಪೊಲೀಸರ ಮಾತು ಕೇಳಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ , ಹಿರಿಯೂರು